

ಕೆ. ನಲ್ಲತಂಬಿ

# ತಮನ್ ನೆಗಾರ

ಆಕಾಶ ಮುಟ್ಟಲು ಹವಣಿಸುತ್ತಿರುವ ಮರಗಳ ನಡುವೆ ನಡೆಯುತ್ತಿದ್ದೆವು. ಮರದ ಸಾಂದ್ರತೆಯನ್ನು ಸೀಳಿಕೊಂಡು ಬಂದ ಕಿರಣಗಳು ತಂಪಾದ ಕಾಡನ್ನು ಬೆಚ್ಚಗಾಗಿಸಿದ್ದವು. ಅವಳು ತನ್ನ ಕೈಬೆರಳುಗಳನ್ನು ನನ್ನ ಬೆರಳುಗಳೊಂದಿಗೆ ಪೋಣಿಸಿದಾಗ ಬಿಗಿಯಾಗಿ ಹಿಡಿದುಕೊಳ್ಳುವ ಧೈರ್ಯವಾಗಲಿ, ಸಡಿಲಗೊಳಿಸಿ ಬಿಡಿಸಿಕೊಳ್ಳುವ ಮನಸ್ಸಾಗಲಿ ಆಗಲಿಲ್ಲ. ಅವಳು ಬಿಗಿಯಾಗಿ ಹಿಡಿದಾಗ ಮಂಜಿನ ಗಡ್ಡೆಯೊಂದು ಬೆಂಕಿಗೆ ಬಿದ್ದ ಹಾಗಿತ್ತು.

ನಿನ್ನೆಯಷ್ಟೇ ಪರಿಚಯವಾದವಳು, ಬಹಳ ವರ್ಷಗಳ ಸಲಿಗೆ ಎಂಬಂತೆ ನನ್ನ ತೋಳನ್ನು ಬಳಸಿ ಹಿಡಿದುಕೊಂಡು ಈ ದಟ್ಟವಾದ ಕಾಡಿನೊಳಗೆ ಹಕ್ಕಿಗಳ ಚಿಲಿಪಿಲಿಯ ಕೇಳುತ್ತ ನಡೆಯುತ್ತಿದ್ದಳು.

ನಿನ್ನೆ ರಾತ್ರಿ ರೆಸಾರ್ಟಿನ ಬಾರಿನಲ್ಲಿ ನನ್ನ ಮೇಜಿನ ಎದುರು ಬಂದು ನಿಂತು **'May I join you?'** ಎಂದಾಗ, ಜೀನ್ಸ್, ಟೀ ಶರ್ಟಿನೊಳಗೆ ಸೊಂಪಾಗಿ ತುಂಬಿಕೊಂಡಿದ್ದ ಮಧ್ಯವಯಸ್ಸಿನವಳನ್ನು ನೋಡಿ ಅವಾಕ್ ಆದರೂ, ಎದ್ದು ನಿಂತು **'Please'** ಎಂದು ಹೇಳುವ ಮುನ್ನವೇ ಕುರ್ಚಿ ಎಳೆದು ಕುಳಿತುಕೊಂಡು, ಕೈ ಚಾಚಿ **'I am Veronica'**, ಎಂದಾಗ ನಾನು ಅವಳ ನೀಲಿ ಕಣ್ಣು, ನೀಳ ಮೂಗು, ರೇಶಿಮೆ ಎಳೆಯಂತಹ ಬಂಗಾರದ ಕೂದಲು, ಕೆಂಪು ತುಟಿಯನ್ನು ನೋಡುತ್ತಿದ್ದೆ. **'You are exquisite'** ಎಂದು ನನ್ನ ಅನುಮತಿ ಇಲ್ಲದೆ ನನ್ನ ಬಾಯಿಂದ ಹೊರಟ ಮಾತಿಗೆ, **'Of course I am'** ಎಂದ ಅವಳ ಕಾನ್ಫಿಡೆನ್ಸಿಗೆ ದಂಗಾಗಿ ಮೌನವಾಗಿದ್ದೆ. ಕೈಯಲ್ಲಿದ್ದ ವೈನ್ ಗ್ಲಾಸನ್ನು ತುಟಿಗೊತ್ತಿ ಮುಗುಳ್ನಕ್ಕಳು. ತುಟಿ ಮತ್ತಷ್ಟು ರಸ ತುಂಬಿಕೊಂಡು ರಂಗೇರಿತು.

★★★

ಹಾರುತ್ತಿದ್ದ ಚಿಟ್ಟೆಗಳನ್ನು ಹಿಡಿಯಲು ಅವಳು ಓಡಿದಾಗ, ಅವಳ ಕಾಲು ಮಗುವಾಯಿತು. ಅವಳು ಅಟ್ಟಿಸಿಕೊಂಡು ಹೋದಷ್ಟೂ ಅವು ಹಾರುತ್ತಿದ್ದವು. ಆಗ ಒಂದು ಜೆನ್ ಕಥೆಯ ನೆನಪಾಗಿ, 'ಅಟ್ಟಿಸಿಕೊಂಡು ಹೋಗಬೇಡ, ಈ ಕಲ್ಲಿನ